**SC No. 216/2022**
**PW-1**

ದಿನಾಂಕ 24.02.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

8. ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಕಲ್ಲುಗಳನ್ನು ನಾನು ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ 60 ಕಲ್ಲುಗಳನ್ನು ಗುರುತಿಸಿದ್ದು, ಅವುಗಳನ್ನು ಮುಮಾ-1 ರಿಂದ ಮುಮಾ-60 ಎಂದು ಗುರುತಿಸಲಾಯಿತು. ಆರೋಪಿತರು ಗಿರಣಿ ಮತ್ತು ಮನೆಗೆ ಕಲ್ಲು ತೂರಿದಾಗ ಒಡೆದ ಗ್ಲಾಸ್ ತುಂಡುಗಳನ್ನು ನಾನು ಗುರುತಿಸುತ್ತಿದ್ದು, ಅವುಗಳನ್ನು ಮುಮಾ-61 ರಿಂದ ಮುಮಾ-63 ಎಂದು ಗುರುತಿಸಲಾಯಿತು. ಒಡೆದ ಹಂಚಿನ ಚೂರುಗಳನ್ನು ನಾನು ಗುರುತಿಸುತ್ತಿದ್ದು, ಅವುಗಳನ್ನು ಮುಮಾ-64 ಮತ್ತು ಮುಮಾ-65 ಎಂದು ಗುರುತಿಸಲಾಯಿತು. ಮಹಜರ ಕಾಲದಲ್ಲಿ ತೆಗೆದಂತಹ ಪೋಟೊಗಳನ್ನು ನಾನು ಗುರುತಿಸುತ್ತೇನೆ. ಆ ಪೋಟೊಗಳನ್ನು ನಿಪಿ-2 ರಿಂದ ನಿಪಿ-7 ಎಂದು ಗುರುತಿಸಲಾಯಿತು. ಆ ಪೋಟೊಗಳ ಪೈಕಿ ನಿಪಿ-2, ನಿಪಿ-3, ನಿಪಿ-4 ಮತ್ತು ನಿಪಿ-5 ಪೋಟೊಗಳಲ್ಲಿ ನಾನು ಇರುತ್ತೇನೆ.

9. ಘಟನೆಯಲ್ಲಿ ಸುಟ್ಟ ಮೋಟಾರ ಬೈಕಗಳ ಪೋಟೊಗಳನ್ನು ನಾನು ಗುರುತಿಸುತ್ತೇನೆ. ಆ ಪೋಟೊಗಳನ್ನು ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಲಾಯಿತು. ಪೋಲಿಸರು ಅಮಾನತು ಪಡಿಸಿಕೊಂಡ ಇತರ ಮೂರು ಮೋಟಾರ ಬೈಕಗಳನ್ನು ನಾವು ನ್ಯಾಯಾಲಯದ ಆದೇಶ ಪಡೆದು, ನಮ್ಮ ಪರವಾಗಿ ಬಿಡಿಸಿಕೊಂಡಿದ್ದೇವೆ. ಘಟನೆಯಲ್ಲಿ ರಕ್ತಸಿಕ್ತವಾದ ನನ್ನ ಶರ್ಟನ್ನು ನಾನು ಗುರುತಿಸುತ್ತಿದ್ದು, ಅದನ್ನು ಮುಮಾ-66 ಎಂದು ಗುರುತಿಸಲಾಯಿತು.

10. ಆ ಬಳಿಕ ಪೋಲಿಸರು ನನ್ನನ್ನು ಬೆಳಗಾವಿಯ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. (ಆ ಹೇಳಿಕೆಯು ಸೀಲಾದ ಕವರನೊಳಗೆ ಇದ್ದು, ಅದನ್ನು ನ್ಯಾಯಾಲಯದಲ್ಲಿ ತೆರೆದು ಸಾಕ್ಷಿಗೆ ತೋರಿಸಲಾಯಿತು.) ಸಾಕ್ಷಿಯು ಆ

ಹೇಳಿಕೆಯನ್ನು ಗುರುತಿಸಿದ್ದು, ಅದನ್ನು ನಿಪಿ-10 ಎಂದು ಮತ್ತು ಅದರಲ್ಲಿರುವ ಸಾಕ್ಷಿಯು ಗುರುತಿಸಿದ ಆತನ ಸಹಿಯನ್ನು ನಿಪಿ-10(ಎ), 10(ಬಿ) ಮತ್ತು 10(ಸಿ) ಎಂದು ಗುರುತಿಸಲಾಯಿತು. ನಮ್ಮ ವಿರುದ್ಧ ಕೃತ್ಯ ಮಾಡಿದಂತಹ ಆರೋಪಿತರನ್ನು ನಾನು ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ 2 ರಿಂದ 8 ನೇ ಆರೋಪಿತರನ್ನು ಗುರುತಿಸುತ್ತಿದ್ದು, ಒಂದನೇ ಆರೋಪಿಯು ಮೃತ ಪಟ್ಟಿರುತ್ತಾನೆ.

<u>ಪಾಟೀ ಸವಾಲುಃ ಶ್ರೀ ಎಸ್ ಎನ್ ಪಿ ವಕೀಲರಿಂದಃ ಆರೋಪಿತರ ಪರವಾಗಿಃ</u>

11. ಆರೋಪಿತರ ಪರ ವಕೀಲರು ಅಭಿಯೋಜನೆಯ ಕೆಲವೊಂದು ಸಾಕ್ಷಿದಾರರನ್ನು ಒಟ್ಟಿಗೆ ಪಾಟೀ ಸವಾಲು ಮಾಡುವುದಾಗಿ ಹೇಳಿ ಸಿ ಆರ್ ಪಿ ಸಿಯ 231(2) ಅಡಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ವಿಶೇಷ ಸರ್ಕಾರಿ ಅಭಿಯೋಜಕರು ಆ ಅರ್ಜಿಗೆ ತಮ್ಮ ತಕರಾರು ಇದೆ ಎಂದು ಹೇಳುತ್ತಾರೆ. ಆ ಕಾರಣದಿಂದ ಪ್ರಕರಣವನ್ನು ಪಾಟೀ ಸವಾಲಿಗೆ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.